<u>ದಿನಾಂಕಃ **16-07-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಪಿ.ಟಿ.ಡಿ. ವಕೀಲರಿಂದಃ</u>

ನಾನು ಮೂಲತಃ ಕೊಪ್ಪದವರು ಇರುತ್ತೇನೆ. ನಾವು ಕೊಪ್ಪದ ಭಾರತ್ ರೈಸ್ ಮಿಲ್ ಬಳಿ ಹುಟ್ಟಿರುವುದು ಮತ್ತು ಕುಟುಂಬ ಇರುವುದು ಇರುತ್ತದೆ. ಭಾರತ್ ರೈಸ್ ಮಿಲ್ ನಿಂದ ಅಬ್ಬೀಗದ್ದೆಗೆ ಸುಮಾರು 2 ಕೀ.ಮೀ. ದೂರ ಇರುತ್ತದೆ ಎಂದರೆ ಸರಿ. ನಾನು ಸಂಜೀವ ಇವರನ್ನು ಮದುವೆಯಾದ ನಂತರ ಅವರು ತೀರಿಕೊಂಡಿದ್ದು ನಾನು ಇನ್ನೊಂದು ಮದುವೆಯಾಗಿರುತ್ತೇನೆ. ನನ್ನ ಎರಡನೇ ಗಂಡನ ಹೆಸರು ಶಂಕರ ಇರುತ್ತಾರೆ. ನಾನು ಈಗ ಪ್ರತ್ಯೇಕವಾಗಿ ವಾಸವಿರುತ್ತೇನೆ. ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ಗುಂಡಪ್ಪ ಎಂಬ ಮೇಸ್ತ್ರಿಯ ಜೊತೆ ಗಾರೆ ಕೆಲಸಕ್ಕೆ ಹೋಗುತ್ತೇನೆ ಎಂದರೆ ಸರಿ. ನನಗೆ 1 ನೇ ಪ್ರತಿವಾದಿ ಮತ್ತು ಶಂಕರಮ್ಮ 13 ವರ್ಷಗಳಿಂದ ಪರಿಚಯ ಇರುತ್ತಾರೆ. ಅವರು ನಮ್ಮ ಮನೆಯ ಪಕ್ಕದ ಮನೆಯವರು ಇರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ವಕೀಲರು ಹೇಳಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾವು ವಾಸವಿರುವ ಮನೆ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ಗೊತ್ತಿರುವುದಿಲ್ಲ. ನಾವು ವಾಸವಿರುವ ಮನೆಗೆ ಹಕ್ಕುಪತ್ರ ಕೊಟ್ಟಿರುವುದಿಲ್ಲ, ಆದರೆ ಆಶ್ರಯ ಮನೆ ಇರುತ್ತದೆ. ನಮ್ಮ ಮನೆ ಪೂರ್ವ ದಿಕ್ಕಿಗೆ ಇರುತ್ತದೆ. ನಮ್ಮ ಮನೆಯ ಎದುರುಗಡೆ ಎರಡನೇ ಮನೆ ಪ್ರತಿವಾದಿಯ ಮನೆ ಇರುತ್ತದೆ.

2. ನಾವು ಮನೆ ಕಟ್ಟಲು ಪರವಾನಗಿಯನ್ನು ಪಡೆದುಕೊಂಡು ಕಟ್ಟಿರುತ್ತೇವೆ. ಸುಕುಮಾರ್ ಇವರಿಗೆ ಮನೆ ಕಟ್ಟಲು ಪಂಚಾಯಿತಿಯವರು ಪರವಾನಗಿ ಕೊಟ್ಟಿರುವುದಿಲ್ಲ. ಆಶ್ರಯ ಮನೆಯನ್ನು ಬೇರೆಯವರಿಗೆ ಮಾರಾಟ ಮಾಡುತ್ತಿದ್ದಾರೆ ಅದನ್ನು ತಡೆದು ನಮಗೆ ಕೊಡಬೇಕು ಎಂದು ನಾವು ಜೀವರಾಜ್ ಶಾಸಕರಿಗೆ ಅರ್ಜಿ ಕೊಟ್ಟಿರುತ್ತೇವೆ. ಸದರಿ ಅರ್ಜಿಗೆ ನಾನು ಸಹಿ ಮಾಡಿರುತ್ತೇನೆ. ನಿಡಿ-3 ರಲ್ಲಿ ನನ್ನ ಸಹಿ ಕಾಣುತ್ತಿಲ್ಲ ಎಂದರೆ ಸರಿ. ನಮ್ಮ ಮನೆಯ ಬಲಭಾಗಕ್ಕೆ ಆರ್ಯುವೇದಿಕ್ ಕಾಲೇಜಿನ ಕಾಂಪೌಂಡ್ ಬರುತ್ತದೆ ಎಂದರೆ ಸರಿ. ಅದೇ ರೀತಿ ಮನೆಯ ಉತ್ತರಕ್ಕೆ ಪೆಯಿಂಟ್ ಸುಧಾಕರ್ ಮನೆ ಬರುತ್ತದೆ ಎಂದರೆ ಸರಿ. ಸುಧಾಕರ್ ಮನೆಯಿಂದ ದಾವಾ ಸ್ವತ್ತು 800 ಮೀಟರ್ ದೂರದಲ್ಲಿ ಇರುತ್ತದೆ ಎಂದರೆ

ಸರಿಯಲ್ಲ. ದಾವಾ ಸ್ವತ್ತಿನಿಂದ ನಮ್ಮ ಮನೆ 1000 ಮೀಟರ್ ದೂರದಲ್ಲಿ ಇದ್ದರೂ ಸಹ ಅಕ್ಕಪಕ್ಕದ ಮನೆ ಇರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಪ್ರತಿವಾದಿಯ ಮನೆ ಯಾವ ಸರ್ವೆ ನಂಬರ್ ನಲ್ಲಿ ಹಾಗೂ ಸೈಟ್ನ ನಂಬರ್ ನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸುಕುಮಾರ್ ರವರು ದಾವಾ ಸ್ವತ್ತಿನಲ್ಲಿ ಬಲತ್ಕಾರವಾಗಿ ಸ್ವಾಧೀನ ಅನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಮನೆಗೆ ವಿಧ್ಯುತ್ ಸಂಪರ್ಕ ಇರುವುದಿಲ್ಲ. ನಮ್ಮ ಮನೆಗೆ ವಿಧ್ಯುತ್ ಸಂಪರ್ಕ ಇರುತ್ತದೆ. ಯಾವ ಕಾರಣಕ್ಕಾಗಿ ಪ್ರತಿವಾದಿ ಮನೆಗೆ ವಿಧ್ಯುತ್ ಸಂಪರ್ಕ ಕೊಟ್ಟಿರುವುದಿಲ್ಲ ಎಂಬುದರ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ಸುಕುಮಾರ್ ಇವರು ಗಾರೆ ಕೆಲಸದಲ್ಲಿ ಸೆಂಟರಿಂಗ್ ಕಾರ್ಯವನ್ನು ಮಾಡುತ್ತಾರೆ ಎಂದರೆ ಸರಿ. ನಮ್ಮ ಮೇಸ್ತ್ರಿ ಗುಂಡಪ್ಪ ಇವರ ಎಲ್ಲಾ ಸೆಂಟರಿಂಗ್ ಕೆಲಸವನ್ನು ಸುಕುಮಾರ್ ಮಾಡುತ್ತಾರೆ ಎಂದರೆ ಸರಿ. ನನ್ನ ಮತ್ತು ಸುಕುಮಾರ್ ನಡುವೆ ಒಳ್ಳೆಯ ಬಾಂಧವ್ಯ ಇರುತ್ತದೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ಸುಳ್ಳಿನಿಂದ ಕೂಡಿರತ್ತದೆ ಎಂದರೆ ಸರಿಯಲ್ಲ. ವಾದಿಯು ಕ್ರಯಕ್ಕೆ ಪಡೆದ ಜಾಗದಲ್ಲಿ ಪ್ರತಿವಾದಿಯರು ಅನಧಿಕೃತವಾಗಿ ಸ್ವಾ ಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ